# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ , ಹಿರಿಯೂರು

ಸಿ ಸಿ ನಂ.899/2020

| | | |
|---|---|---|
| ಹೆಸರು | - ಗೌರಿಶಂಕರ್ | CW-12<br>PW-5 |
| ತಂದೆ ಹೆಸರು | - ಶ್ರೀರಂಗಪ್ಪ | |
| ವಯಸ್ಸು | - 47 ವರ್ಷ | |
| ಉದ್ಯೋಗ | - ಹೆಚ್ ಸಿ 1367 ಅಬ್ಬಿನಹೊಳೆ ಪೊಲೀಸ್ ಠಾಣೆಗ | |
| ವಾಸಸ್ಥಳ | - ಹಿರಿಯೂರು | |

ದಿನಾಂಕಃ 29.10.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ನಾನು 2017 ರಿಂದ 2024 ಆಗಸ್ಟ್ ವರೆಗೆ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ26.04.2019 ರಂದು ರಾತ್ರಿ 9.30 ರ ಸಮಯದಲ್ಲಿ ನಾನು ಠಾಣೆಯಲ್ಲಿ ಎಸ್ ಹೆಚ್ ಒ ಕರ್ತವ್ಯದಲ್ಲಿದ್ದಾಗ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ.152/20219 ರಂತೆ ಪ್ರಕರಣ ದಾಖಲಿಸಿ ಪ್ರ ವ ವರದಿ ತಯಾರಿಸಿ, ಮೇಲಾಧಿಕಾರಿಗೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ದೂರನ್ನು ನಿಪಿ-5 ಮತ್ತು ಸಹಿಯನ್ನು ನಿಪಿ-5(ಎ) ಎಂದು ಪಿರ್ಯಾದಿ ಸಹಿಯನ್ನು ನಿಪಿ-5(ಬಿ) ಎಂದು ಪ್ರ ವ ವರದಿಯನ್ನು ನಿಪಿ-6 ಎಂದು ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

27.04.2019 ರಂದು ಸಿ ಪಿ ಐ ಚಾಸಾ.14 ರವರ ಆದೇಶದ ಮೇರೇಗೆ ಆಸ್ಪತ್ರೆಗೆ ಭೇಟಿ ನೀಡಿ ಬೆಳಿಗ್ಗೆ 6 ರಿಂದ 8 ರ ವರೆಗೆ ಶವ ತನಿಖೆಯನ್ನು ಚಾಸಾ.5 ಮತ್ತು 6 ರವರು ಸಮಕ್ಷಮ ಮಾಡಿದ್ದೇನೆ. ಸದರಿ ಶವ ತನಿಖಾ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ದಾಖಲೆಯನ್ನು ನಿಪಿ-7 ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಂತರ

ಚಾಸಾ.6 ಮತ್ತು 7 ರವರ ಹೇಳಿಕೆಗಳನ್ನು ಮಾಡಿಕೊಂಡಿದ್ದೇನೆ. ನಂತರ ಪಿ ಸಿ 2057 ರವರಿಗೆ ಶವದ ಉಸ್ತುವಾರಿಗೆ ನೇಮಿಸಿ ಡಾ. ಸಂದೀಪ್ ವೈದ್ಯರಿಗೆ ಶವದ ವೈದ್ಯಕೀಯ ಪರೀಕ್ಷೆ ನಡೆಸಲು ಮನವಿ ಮಾಡಿಕೊಂಡಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಸಿ ಪಿ ಐ ಚನ್ನೇಗೌಡ ಚಾಸಾ.14 ರವರಿಗೆ ವಹಿಸಿದ್ದೇನೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಕೆ ವಕೀಲರಿಂದಃ</u>**

ದಿಃ26.04.2019 ರಂದು ನನಗೆ ಯಾರು ಬಂದು ದೂರು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪ್ರಕರಣ ದಾಖಲಿಸಿಲ್ಲ ಮತ್ತು ಪ್ರ ವ ವರದಿ ತಯಾರಿಸಿಲ್ಲ ಎಂದರೆ ಸರಿಯಲ್ಲ.

27.04.2019 ರಂದು ಸಿ ಪಿ ಐ ಚಾಸಾ.14 ರವರು ನನಗೆ ಯಾವುದೇ ಆದೇಶ ನೀಡಿಲ್ಲ ನಾನು ಯಾವುದೇ ಆಸ್ಪತ್ರೆಗೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಶವ ತನಿಖೆಯನ್ನು ಚಾಸಾ.5 ಮತ್ತು 6 ರವರು ಸಮಕ್ಷಮ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ.6 ಮತ್ತು 7 ರವರ ಹೇಳಿಕೆಗಳನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪಿ ಸಿ 2057 ರವರಿಗೆ ಶವದ ಉಸ್ತುವಾರಿಗೆ ನೇಮಿಸಿ ಲ್ಲ ಎಂದರೆ ಸರಿಯಲ್ಲ. ನಾನು ವೈದ್ಯರಿಗೆ ಯಾವುದೇ ಮನವಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.ನಾನು ಕಡತವನ್ನು ಮುಂದಿನ ತನಿಖೆಗಾಗಿ ಸಿ ಪಿ ಐ ಚನ್ನೇಗೌಡ ಚಾಸಾ.14 ರವರಿಗೆ ವಹಿಸಿದ್ದೇನೆ. ನಾನು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು